೧೯೨

# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 440 |
| 2. | ಪ್ರಶ್ನೆ ಕೇಳಿದ ಸದಸ್ಯರು | ಶ್ರೀ.ಭೀಮಾರಾವ್ ಬಸವರಾಜ ಪಾಟೀಲ್ |
| 3. | ಉತ್ತರಿಸುವ ದಿನಾಂಕ | 12.12.2024 |
| 4. | ಉತ್ತರಿಸುವ ಸಚಿವರು | ಮುಖ್ಯಮಂತ್ರಿಯವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಚುನಾಯಿತ ಪ್ರತಿನಿಧಿಗಳ ಶಿಷ್ಟಾಚಾರ ಕುರಿತು ಸುತ್ತೋಲೆಗಳನ್ನು ಹೊರಡಿಸಿರುವುದು ನಿಜವೇ: | **ಹೌದು** |
| ಆ) | ಹಾಗಿದ್ದಲ್ಲಿ, ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಜಿಟಿಗುಪ್ಪ ಊರು ಶಮತಾಬಾದ್ ರಸ್ತೆ ಶಂಕುಸ್ಥಾಪನೆ ಜಿಲ್ಲೆಗೆ ಸಂಬಂಧಪಟ್ಟ ಅಧಿಕಾರಿ ಹಾಗೂ ತಾಲ್ಲೂಕು ಅಧಿಕಾರಿಗಳು ಆಹ್ವಾನಿಸದೆ ವಿಧಾನ ಪರಿಷತ್ ಶಾಸಕರುಗಳಿಗೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; | **ಹೌದು**<br>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರವರು ಲೋಕೋಪಯೋಗಿ ಇಲಾಖೆ ಉಪ-ವಿಭಾಗ ಹುಮನಾಬಾದ ಇವರ ದಿ: 09.08.2024 ರ ವರದಿಯಂತೆ, ದಿ: 29.07.2024 ರಂದು ಸದರಿ ಕಾಮಗಾರಿಯ ಯಾವುದೇ ಭೂಮಿ ಪೂಜೆ ಅಥವಾ ಅಡಿಗಲ್ಲು ಸಮಾರಂಭ ಇಲಾಖೆ ವತಿಯಿಂದ ನೆರವೇರಿಸದೆ ಇರುವುದರಿಂದ ಯಾವುದೇ ಶಿಷ್ಟಾಚಾರ ಉಲ್ಲಂಘನೆ ಮಾಡಿರುವುದಿಲ್ಲ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಗೆ ಸಂಬಂಧಪಟ್ಟ ಅಧಿಕಾರಿ ಹಾಗೂ ತಾಲೂಕು ಅಧಿಕಾರಿಗಳಿಂದ ಸನ್ಮಾನ್ಯ ವಿಧಾನ ಪರಿಷತ್ ಶಾಸಕರುಗಳಿಗೆ ಯಾವುದೇ ಶಿಷ್ಟಾಚಾರ ಉಲ್ಲಂಘನೆ ಯಾಗಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಬೀದರ್ ಜಿಲ್ಲೆ ಇವರು ವರದಿ ನೀಡಿರುತ್ತಾರೆ. |
| ಇ) | ಬಂದಿದ್ದಲ್ಲಿ, ಶಿಷ್ಟಾಚಾರ ಉಲ್ಲಂಘಿಸಿದ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮವೇನು; | ಅನ್ವಯಿಸುವುದಿಲ್ಲ |
| ಈ) | ಶಿಷ್ಟಾಚಾರ ಉಲ್ಲಂಘನೆಯಂತಹ ಮುಜಗರ, ಅವಮಾನ ಪ್ರಸಂಗಗಳನ್ನು ತಪ್ಪಿಸಲಾಗಿದೆ; ಹಾಗಿದ್ದಲ್ಲಿ, ಯಾವ ರೀತಿ ಕಠಿಣ ಕ್ರಮ ಕೈಗೊಳ್ಳಲಾಗುವುದು? | ಅನ್ವಯಿಸುವುದಿಲ್ಲ. |

**(ಸಂಖ್ಯೆ: ಸಿಆಸುಇ 69 ಹೆಚ್‌ಪಿಎ 2024)**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ